# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು

## ಸಂಚಾರ (ವಾಣಿಜ್ಯ) ಇಲಾಖೆ

ಸಂ.ಕರಾಸಾ/ಕೇಕ/ಸಂ/ವಾ-1/449/1337/19-20 ದಿನಾಂಕ: 5.10.2019

**ಸುತ್ತೋಲೆ ಸಂಖ್ಯೆ: 1513 /2019**

**(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)**

**ವಿಷಯ:** ಕ.ರಾ.ರ.ಸಾ ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ದ್ವಿಚಕ್ರ ಮತ್ತು ಕಾರು ನಿಲುಗಡೆ ದರಗಳ ಪರಿಷ್ಕರಣೆ ಕುರಿತು.

**ಉಲ್ಲೇಖ:** 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017 ದಿ:26-07-2017.
2. ದಿನಾಂಕ 20.06.2019 ರಂದು ನಡೆದ ಸಿ.ಸಿ.ಜಿ ಸಮಿತಿ ಸಭೆಯ ನಡಾವಳಿ.

-:-

ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ದ್ವಿಚಕ್ರ ವಾಹನ ನಿಲ್ದಾಣ ಹಾಗೂ ಕಾರು ನಿಲುಗಡೆ ಸ್ಥಳದ ಸೌಲಭ್ಯವನ್ನು ಕಲ್ಪಿಸಿ, ಮೂರು ವರ್ಷಗಳ ಅವಧಿಗೆ ಪರವಾನಗಿ ನೀಡಲಾಗುತ್ತಿದೆ. ಪಾರ್ಕಿಂಗ್ ದರಗಳನ್ನು ಪರಿಷ್ಕರಿಸಿ ಈಗಾಗಲೇ 4 ವರ್ಷಗಳಾಗಿದ್ದು, ಪ್ರಸ್ತುತ ಅವಧಿಯಲ್ಲಿ ಪಾರ್ಕಿಂಗ್ ದರಗಳನ್ನು ಪರಿಷ್ಕರಿಸುವ ಮೂಲಕ ಪಾರ್ಕಿಂಗ್ ನಿಲುಗಡೆಯ ಸ್ಥಳಗಳಿಗೆ ಹೆಚ್ಚಿನ ಆಸಕ್ತದಾರರನ್ನು ಆಕರ್ಷಿಸುವುದಲ್ಲದೆ, ನಿಗಮದ ವಾಣಿಜ್ಯ ಆದಾಯವನ್ನೂ ಸಹ ಹೆಚ್ಚಿಸಬಹುದಾಗಿದೆ.

ನಿಗಮದ ಬಸ್ ನಿಲ್ದಾಣಗಳಲ್ಲಿ ವಾಹನಗಳ ನಿಲುಗಡೆಗೆ ವಿಧಿಸಬೇಕಿರುವ ದರಗಳನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ.

A) **ಬೆಂಗಳೂರು, ಮಂಗಳೂರು ಮತ್ತು ಮೈಸೂರು ನಗರದ ಬಸ್ ನಿಲ್ದಾಣಗಳಲ್ಲಿನ ನಿಲುಗಡೆ ದರಗಳು;**

| ಸಮಯ (ಗಂಟೆಗಳಲ್ಲಿ) | 0-2 | 2-4 | 4-8 | 8-12 | 12-24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| ವಾಹನಗಳ ಮಾದರಿ | ದರಗಳು ₹ಗಳಲ್ಲಿ | | | | | |
| ದ್ವಿಚಕ್ರ ವಾಹನಗಳು | 10/- | 20/- | 30/- | 40/- | 50/- | ಪ್ರತಿದಿನಕ್ಕೆ ರೂ.100/- |
| ಕಾರು | 20/- | 40/- | 60/- | 80/- | 100/- | ಪ್ರತಿದಿನಕ್ಕೆ ರೂ.200/- |

**B) ಇತರೆ ಜಿಲ್ಲಾ ಕೇಂದ್ರ ಬಸ್ ನಿಲ್ದಾಣಗಳಲ್ಲಿನ ನಿಲುಗಡೆ ದರಗಳು;**

| ಸಮಯ (ಗಂಟೆಗಳಲ್ಲಿ) | 0-2 | 2-4 | 4-8 | 8-12 | 12-24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| ವಾಹನಗಳ ಮಾದರಿ | ದರಗಳು ₹ಗಳಲ್ಲಿ | | | | | |
| ದ್ವಿಚಕ್ರ ವಾಹನಗಳು | 5/- | 10/- | 15/- | 20/- | 25/- | ಪ್ರತಿದಿನಕ್ಕೆ ರೂ.25/- |
| ಕಾರು | 10/- | 20/- | 30/- | 40/- | 50/- | ಪ್ರತಿದಿನಕ್ಕೆ ರೂ.50/- |



....೨

**C) ತಾಲ್ಲೂಕು / ಹೋಬಳಿ ಕೇಂದ್ರ ಬಸ್ ನಿಲ್ದಾಣಗಳಲ್ಲಿನ ನಿಲುಗಡೆ ದರಗಳು;**

| ಸಮಯ (ಗಂಟೆಗಳಲ್ಲಿ) | 0-2 | 2-4 | 4-8 | 8-12 | 12-24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| ವಾಹನಗಳ ಮಾದರಿ | ದರಗಳು ₹ಗಳಲ್ಲಿ | | | | | |
| ದ್ವಿಚಕ್ರ ವಾಹನಗಳು | 5/- | 5/- | 10/- | 15/- | 20/- | ಪ್ರತಿದಿನಕ್ಕೆ ರೂ.20/- |
| ಕಾರು | 10/- | 10/- | 20/- | 30/- | 40/- | ಪ್ರತಿದಿನಕ್ಕೆ ರೂ.40/- |

- **ಪರಿಷ್ಕೃತ ದರಗಳನ್ನು ಅಳವಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು:**

1. ಮೇಲ್ಕಂಡ ಪರಿಷ್ಕೃತ ದರಗಳನ್ನು ಪಡೆಯಲು ಇಚ್ಛಿಸುವ ಪಾರ್ಕಿಂಗ್ ಸ್ಥಳದ ಹಾಲಿ ಅಂದರೆ ಚಾಲ್ತಿಯಲ್ಲಿರುವ ಪರವಾನಗಿದಾರರು, ಹಾಲಿ ಮಾಸಿಕ ಪರವಾನಗಿ ಶುಲ್ಕದ ಶೇ.25 ರಷ್ಟು, ಮಾಸಿಕ ಪರವಾನಗಿ ಶುಲ್ಕವನ್ನು ಹೆಚ್ಚುವರಿಯಾಗಿ ನಿಗಮಕ್ಕೆ ನೀಡಬೇಕು.
2. ಪರಿಷ್ಕೃತ ದರಗಳನ್ನು ಅಳವಡಿಸಿಕೊಳ್ಳಲು ಇಚ್ಛಿಸುವ ಹಾಲಿ ಪರವಾನಗಿದಾರರೊಂದಿಗೆ ಹೆಚ್ಚುವರಿ ಶುಲ್ಕ ಪಾವತಿಯ ಸಂಬಂಧ ಪೂರಕ ಕರಾರು ಒಪ್ಪಂದ ಮಾಡಿಕೊಳ್ಳುವುದು. ಪರಿಷ್ಕೃತ ಪರವಾನಗಿ ಶುಲ್ಕ ಮತ್ತು ಪಾರ್ಕಿಂಗ್ ದರಗಳು, ಹಾಲಿ ಕರಾರಿನ ಅಂತ್ಯದವರೆಗೆ ಅನ್ವಯಿಸುತ್ತವೆ.
3. ಮೇಲ್ಕಂಡ ಪರಿಷ್ಕೃತ ನಿಲುಗಡೆ ದರಗಳನ್ನು ಅಳವಡಿಸಿಕೊಳ್ಳುವ ಸಂಬಂಧ ಹೆಚ್ಚುವರಿ ಮಾಸಿಕ ಪರವಾನಗಿ ಶುಲ್ಕ ಪಾವತಿಸಲು ಇಚ್ಛಿಸದ ಪರವಾನಗಿದಾರರ ಕರಾರನ್ನು ನಿಯಮಾವಳಿಯನ್ವಯ ನೋಟೀಸ್ ನೀಡಿ ರದ್ದುಗೊಳಿಸುವುದು. ಪರವಾನಗಿಯ ರದ್ದತಿ ದಿನಾಂಕದವರೆಗೂ ಪರವಾನಗಿದಾರರು ಹಳೆಯ ದರಗಳನ್ನೇ ಬಳಕೆದಾರರಿಂದ ಪಡೆಯಬೇಕು.
4. ಏಕೈಕ ಪರವಾನಗಿದಾರರ ನಿರ್ವಹಣೆಯಲ್ಲಿರುವ ಬಸ್ ನಿಲ್ದಾಣಗಳಲ್ಲಿನ ದ್ವಿಚಕ್ರ / ಕಾರು ನಿಲುಗಡೆ ಸವಾರರಿಂದ ಕರಾರಿನಲ್ಲಿ ನಮೂದಿಸಿರುವ ದರಗಳನ್ನು ಮಾತ್ರ ಪಡೆಯಬೇಕಿರುತ್ತದೆ. ಸದರಿಯವರು ಮೇಲ್ಕಂಡ ಪರಿಷ್ಕೃತ ದರಗಳನ್ನು ಪಡೆಯಬೇಕಿದ್ದಲ್ಲಿ, ಅವರಿಂದ ಮನವಿ ಪತ್ರವನ್ನು ಸಂಬಂಧಿಸಿದ ವಿಭಾಗವು ಪಡೆದು, ಪರವಾನಗಿ ಶುಲ್ಕದಲ್ಲಿನ ಹೆಚ್ಚಳದ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಿ ಅನುಮೋದನೆ ಪಡೆಯಬೇಕು.
5. ಏಕೈಕ ಪರವಾನಗಿದಾರರು ಪಾವತಿಸಬೇಕಾದ ಹೆಚ್ಚುವರಿ ಮಾಸಿಕ ಪರವಾನಗಿ ಶುಲ್ಕದ ಬಗ್ಗೆ ಕೇಂದ್ರ ಕಛೇರಿಯಲ್ಲಿ ತೀರ್ಮಾನಿಸಲಾಗುವುದು. ಅಲ್ಲಿಯವರೆಗೂ, ಏಕೈಕ ಪರವಾನಗಿದಾರರು ಕರಾರು ಒಪ್ಪಂದದಲ್ಲಿನ ದರಗಳನ್ನು ವಿಧಿಸಬೇಕು. ಇದನ್ನು ಸಂಬಂಧಿಸಿದ ವಿಭಾಗದವರು ದೃಢೀಕರಿಸಿಕೊಳ್ಳಬೇಕು. ಒಂದು ವೇಳೆ ಏಕೈಕ ಪರವಾನಗಿದಾರರು ದ್ವಿಚಕ್ರ / ಕಾರು ನಿಲುಗಡೆ ಪರವಾನಗಿದಾರರಿಂದ ಹೆಚ್ಚುವರಿ ದರ ಪಡೆಯುತ್ತಿರುವ ಬಗ್ಗೆ ತಿಳಿದು ಬಂದಲ್ಲಿ, ಕರಾರಿನ ನಿಯಮಾವಳಿಯಂತೆ ದಂಡ ವಿಧಿಸಲು ಹಾಗೂ ಇತರೆ ಕ್ರಮ ತೆಗೆದುಕೊಳ್ಳುವುದು.
6. ಬೆಂಗಳೂರು ಹಾಗೂ ಇತರೆ ಜಿಲ್ಲಾ ಕೇಂದ್ರ ಬಸ್ ನಿಲ್ದಾಣಗಳಲ್ಲಿ ವಾಹನಗಳು ಒಳಬರುವ ಮತ್ತು ಹೊರಹೋಗುವ ಸಮಯವನ್ನು ದಾಖಲಿಸುವ ಪಾರ್ಕಿಂಗ್ ಮೀಟರ್‌ನ್ನು ಪರವಾನಗಿದಾರರು ಕಡ್ಡಾಯವಾಗಿ ಬಳಸುವುದು. ಪಾರ್ಕಿಂಗ್ ಮೀಟರ್‌ನ್ನು ಅಳವಡಿಸಿಕೊಳ್ಳಲು, ಹಾಲಿ ಇರುವ ಪರವಾನಗಿದಾರರಿಗೆ ಮೂರು ತಿಂಗಳು ಕಾಲಾವಕಾಶ ನೀಡಿ, ನೋಟೀಸ್ ಜಾರಿ ಮಾಡುವುದು.
7. ದ್ವಿಚಕ್ರ / ಕಾರು ನಿಲುಗಡೆ ಪರವಾನಗಿದಾರರು ವಾಹನಗಳ ನಿಲುಗಡೆಯ ದರಗಳ ಪಟ್ಟಿಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ದರಗಳ ಪಟ್ಟಿಯನ್ನು ಪ್ರದರ್ಶಿಸಿರುವ ಬಗ್ಗೆ ನಿಲ್ದಾಣದ ಮೇಲ್ವಿಚಾರಕರು ದಿನಂಪ್ರತಿ ಮೇಲ್ವಿಚಾರಣೆ ಮಾಡುವುದು. ನಿಲ್ದಾಣಕ್ಕೆ ನಿಗಮದ ಅಧಿಕಾರಿಗಳು ಭೇಟಿ ನೀಡಿದಾಗ, ನಿಲುಗಡೆ ದರಗಳು ಪ್ರದರ್ಶಿಸಿರುವ ಬಗ್ಗೆ ಪರಿಶೀಲಿಸುವುದು.



......3

8. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಪರವಾನಗಿದಾರರು ಪಡೆಯುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಸಂದರ್ಭದಲ್ಲಿ ವಿಧಿಸಲಾಗುವ ದಂಡದ ಮೊತ್ತವನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ. ಇದು ಹಾಲಿ ಕರಾರುಗಳಿಗೂ ಅನ್ವಯಿಸುತ್ತದೆ. ಪರವಾನಗಿದಾರರಿಗೆ ನೋಟೀಸ್ ನೀಡಿ, ಅನುಷ್ಠಾನಗೊಳಿಸುವುದು.

| ಕ್ರ.ಸಂ. | ಪ್ರಕರಣಗಳು (ಪ್ರತಿ ತಿಂಗಳಿಗೆ) | ದಂಡದ ಮೊತ್ತ ₹ಗಳಲ್ಲಿ |
|---|---|---|
| 1 | ಮೊದಲ ಐದು (05) ಪ್ರಕರಣಗಳಿಗೆ | ತಲಾ ₹500/- |
| 2 | ನಂತರದ ಐದು (05) ಪ್ರಕರಣಗಳಿಗೆ | ತಲಾ ₹1000/- |
| 3 | ತದನಂತದ ಪ್ರಕರಣಗಳು ದಾಖಲಾದಲ್ಲಿ | ಕರಾರನ್ನು ರದ್ದುಪಡಿಸುವುದು ಹಾಗೂ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸುವುದು. |

9. ಖಾಲಿಯಿರುವ / ಖಾಲಿಯಾಗಲಿರುವ ದ್ವಿಚಕ್ರ ವಾಹನ ನಿಲುಗಡೆ ಸ್ಥಳಕ್ಕೆ ಪರಿಷ್ಕೃತ ದರಗಳನ್ವಯ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕವನ್ನು ಕ್ರಮ ಸಂಖ್ಯೆ 1 ರನ್ವಯ ಹೆಚ್ಚಿಸಿ, ಹೊಸದಾಗಿ ಪರವಾನಗಿದಾರರ ಆಯ್ಕೆಗೆ ಕ್ರಮ ಕೈಗೊಳ್ಳುವುದು.

10. ಮೇಲ್ಕಂಡ ಪರಿಷ್ಕೃತ ದರಗಳು / ನಿಯಮಗಳ ಅಳವಡಿಕೆಯ ಹೊರತಾಗಿ ಆಹ್ವಾನಿಸಲಾಗಿರುವ ಟೆಂಡರ್ / ಸಂಧಾನದಲ್ಲಿ ಆಯ್ಕೆಯಾಗಿರುವ ಪರವಾನಗಿದಾರರಿಗೂ ಈ ಸುತ್ತೋಲೆಯ ನಿಯಮಾವಳಿಗಳು ಅನ್ವಯಿಸುತ್ತವೆ.

ಉಳಿದಂತೆ ಜಾರಿಯಲ್ಲಿರುವ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 787/2017 ಮತ್ತು ಪೂರಕ ಆದೇಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸುತ್ತೋಲೆಯು ದಿನಾಂಕ 01-11-2019 ರಿಂದ ಜಾರಿಗೆ ಬರುತ್ತದೆ. ಸದರಿ ಆದೇಶ ಸ್ವೀಕರಿಸಿ, ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ಕಳುಹಿಸುವುದು.

(ಶಿವಯೋಗಿ ಸಿ ಕಳಸದ, ಭಾ.ಆ.ಸೇ.,)

**ವ್ಯವಸ್ಥಾಪಕ ನಿರ್ದೇಶಕರು**
**ಕ.ರಾ.ರ.ಸಾ ನಿಗಮ**

**ಪ್ರತಿಯನ್ನು:**

1) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಅಧ್ಯಕ್ಷರು / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.